Dc-531
T-P-2

Reg no KRNN 12 - For Influential Publicity - 16-9-76

ಕೃಷಿ ಮಹೋತ್ಸವ ನೆರವೇರಿ ವಜ್ರಮಹೋತ್ಸವ ನೇರವೇರಿಸಲಿರುವ ಪತ್ರಿಕೆ

ಸತ್ಯವಾದಿ
SATYAVADI

60th Diamond Jubilee Year
ನೇ ವಜ್ರಮಹೋತ್ಸವ ವರ್ಷ
★ Satyavadi Daily . Mysore 4 ★

ಸಂಸ್ಥಾಪಕರು : ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕರು : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ (5 ಪೈಸೆ

ವ್ಯವಸಾಯ ಬೆಲೆಗಳ ಆಯೋಗದ ಶಿಫಾರಸು

ನವ ದೆಹಲಿ — ಖಾರಿಫ್ ಅಕ್ಕಿ ಶೇಖರಣೆ ಗುರಿಯನ್ನು ಕಳೆದ ವರ್ಷಕ್ಕಿಂತ 0.2 ಮಿಲಿಯ ಟನ್‌ಗಳು ಹೆಚ್ಚು ಶೇಖರಣೆ ಮಾಡಲು ವ್ಯವಸಾಯ ಬೆಲೆಗಳ ಆಯೋಗ ಶಿಫಾರಸು ಮಾಡಿದೆ.

★

ನಿಧಿ ಹೆಚ್ಚಿಸಲು ಸುಗ್ರೀವಾಜ್ಞೆ

ಬೆಂಗಳೂರು — ಕರ್ನಾಟಕ ಕಂಟಿಜೆನ್ಸಿ ನಿಧಿಗೆ ಹಂಗಾಮಿ ಆಗಿ ಕೆತ್ತು ಕೋಟಿ ರೂಪಾಯಿಗಳಿಂದ 20 ಕೋಟಿ ರೂಪಾಯಿಗಳಿಗೆ ಹೆಚ್ಚಿಸಲು ಸರಕಾರ ಸುಗ್ರೀವಾಜ್ಞೆ ಹೊರಡಿಸಿದೆ ಇದು ಅಭಾವ ಪರಿಸ್ಥಿತಿಯ ಪರಿಹಾರ ಕಾರ್ಯ ವಿಸ್ತಾರದ ಖರ್ಚುಗಳಿಗಾಗಿ.

○

ಪ್ರಧಾನಿ ಇಂದಿರಾರವರ ಕರೆ

ಕೊಯಮತ್ತೂರು — ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರು ಒಂದು ಪ್ರಚಂಡ ಸಭೆಯಲ್ಲಿ ಭಾಷಣ ಮಾಡುತ್ತಾ, ರಾಜ್ಯಗಳು ಬಂಡವಾಳವನ್ನು ಪರಮಾವಧಿಗೆ ಮಾಡಲು ಕರೆ ನೀಡಿದರು.

●

ಹೊಸದಾದ ಖನಿಜ ಪತ್ತೆ

ಜಯಪುರ — ಅಗ್ನಿ ಪರ್ವತದ ಬೂದಿ ಎಂಬ ಖನಿಜ ಬಾರ್ಮರ್ ಜಿಲ್ಲೆಯಲ್ಲಿ ಪತ್ತೆ ಆಗಿದೆ ಈ ಖನಿಜ ಸೀಮೆಂಟಿಗೆ ಬದಲಾಗಿದೆ.

★

ಶೇಕಡ 4 ರಷ್ಟು ಉತ್ಪಾದನೆ ಹೆಚ್ಚಿದೆ

ನವ ದೆಹಲಿ — ವಿಶ್ವದ ಕೈಗಾರಿಕೆ ಉತ್ಪಾದನೆ ಶೇಕಡ 4 ರಷ್ಟು ಹೆಚ್ಚಾಗಿದೆ ಎಂದು ವರದಿ ಆಗಿದೆ

●

ಕೊಲೆ ಪಾತಕಿಗೆ ಮರಣ ದಂಡನೆ ವಿಧಿ

ಮಂಡ್ಯ — ತನ್ನ ಸ್ವಂತ ಸೋದರಿಯನ್ನೇ ಭೂಮಿ ವ್ಯಾಜ್ಯದಲ್ಲಿ ಕೊಲೆ ಮಾಡಿದ ಕೆರಿಗೋಡು ಗ್ರಾಮದ ಅಗಸರ ದೊಡ್ಡಯ್ಯ ಭೈರಶೆಟ್ಟಿಗೆ ಮರಣದಂಡನೆ ವಿಧಿಸಲಾಯಿತು

★

ಅಧ್ಯಕ್ಷ ಫೋರ್ಡ್‌ರವರ ಸಹಿ

ವಾಷಿಂಗ್ಟನ್ — ನಲವತ್ತಮೂರು ವರ್ಷಗಳಿಂದ ತಾವೂ ತಮ್ಮ ಹಿಂದಿನ ಅಧಿಕಾರಿಗಳು ಹೊಂದಿದ್ದ ಜರೂರು ಅಧಿಕಾರಗಳನ್ನು ನಿಯಂತ್ರಿಸುವ ಶಾಸನಕ್ಕೆ ಅಧ್ಯಕ್ಷ ಫೋರ್ಡ್ ಸಹಿ ಮಾಡಿದರು.

★

ಕಲ್ಕತ್ತಾದ ಶೇಕಡ 50 ಮಂದಿಗೆ ಅನಾರೋಗ್ಯ

ಕಲ್ಕತ್ತಾ — ವಾಯು ಕೆಡುವುದರಿಂದ ಕಲ್ಕತ್ತಾದ ಶೇಕಡ 50 ನಿವಾಸಿಗಳು ಉಚ್ಛ್ವಾಸನಿಶ್ವಾಸ ರೋಗಗಳಿಂದ ನರಳುತ್ತಿರುವುದಾಗಿ ಒಂದು ಸರ್ವೇಯಿಂದ ಗೊತ್ತಾಗಿದೆ.

ಬಿಳಿಗಾಳಿ ಹಾವಳಿ

ಇಪ್ಪತ್ತನಾಲ್ಕು ಪರಗಣ ಮತ್ತು ಮಿಡ್ನಾಪುರ ಜಿಲ್ಲೆಗಳಲ್ಲಿ ಬೀಸಿದ ಭಾರಿ ಚಂಡ ಮಾರುತದಿಂದ ವಿದ್ಯುತ್ ಟ್ರಾನ್ಸ್‌ಫಾರ್ಮರ್ ಕಂಬಗಳು ಕೆತ್ತು ಬಿದ್ದವು ಸುಂದರಭಾನ್ ಭಾಗದಲ್ಲಿಯ ದಂಡೆಯ ಮೂರು ಸಾವಿರ ನಳಿಗೆ ಒಡೆದಿವೆ ಇದರ ರಿಪೇರಿಗೆ ನಾಲ್ಕು ಕೋಟಿ ರೂ. ಆವಶ್ಯಕವಾಗುವುದು

○

ಮೊಸೂದೆ ನುಂಡನೆ

ಭುವನೇಶ್ವರ — ಜಗನ್ನಾಥ ದೇವಾಲಯದಲ್ಲಿ ಪಂಡಾಗಳು, ಮಾರ್ಗದರ್ಶಕರು, ಪೇನ್ಯರು ಮುಂತಾದವರಲ್ಲಿಯ ಅಶಿಸ್ತು ಮತ್ತು ವಿರುದ್ಧ ಚಟುವಟಿಕೆಗಳ ಬಗ್ಗೆ ಹತೋಟಿ ಇಡಲು ಮುಂದಿನ ಶಾಸನ ಸಭೆಯಲ್ಲಿ ಒಂದು ಸರ್ಕಾರಿ ಮಸೂದೆ ತರಲಾಗುವುದು.

★

ಯಾವ ಭಾಷೆಯೂ ಯಾವ ಜನರ ಮೇಲೂ ಒತ್ತಾಯಪೂರ್ವಕವಾಗಿ ಹೇರಲ್ಪಡುವಹಿಲ್ಲವೆಂದು ಪ್ರಧಾನಿ ಶ್ರೀಮತಿ ಇಂದಿರಾರವರು ಕೊಯಿಲಪಟ್ಟಣದ ಸಭೆಯೊಂದರಲ್ಲಿ ತಿಳಿಸಿದರು.

ಅನಿರೀಕ್ಷಿತ ದಾಳಿ

ತುಮಕೂರು — ಇಲ್ಲಿ ನಡೆಸಲಾದ ಅನಿರೀಕ್ಷಿತ ದಾಳಿಯಲ್ಲಿ ಇಲ್ಲಿಯ ನಿವಾಸಿಗಳಿಂದ 5 ಲಕ್ಷ ರೂಪಾಯಿಗಳ ಮೌಲ್ಯದ ಗಿರವಿ ಇಡಲಾಗಿದ್ದ ಚಿನ್ನ ಮತ್ತು ಬೆಳ್ಳಿ ಪದಾರ್ಥಗಳು, ಮೊ ನೋಟುಗಳನ್ನು ವಶಪಡಿಸಿಕೊಳ್ಳಲಾಯಿತು ಗಿರವಿ ಪದಾರ್ಥಗಳನ್ನು ಬಚ್ಚಲ ಮನೆ, ಅಂಗಡಿ ಮಳಿಗೆ, ಪೂಜಾ ಸ್ಥಳಗಳಲ್ಲಿ ಮುಚ್ಚಿಡಲಾಗಿತ್ತು.

★

ಶುಕ್ಲಾರವರ ಸೂಚನೆ

ಬೊಂಬಾಯಿ — ಇಂಗ್ಲೀಷು ಇಲ್ಲಿಯವರೆಗೆ ಪ್ರಭಾವಶಾಲಿ ಭಾಷೆ ಆಗಿರುವದು ಗುಲಾಮಗಿರಿಯ ಗುರುತೆಂದೂ, ದೇಶದಲ್ಲಿ ಎಷ್ಟು ಬೇಗ ಇಂಗ್ಲೀಷು ಭಾಷೆ ಪ್ರಭಾವ ತೆಗೆದರೆ ಅಷ್ಟೂ ರಾಷ್ಟ್ರೀಯತೆಯ ಹಿತಕ್ಕೆ ಉತ್ತಮವೆಂದು ಭಾರತ ಸರ್ಕಾರದ ಮಂತ್ರಿ ಶ್ರೀ ವಿ. ಸಿ. ಶುಕ್ಲಾರವರು ಒಂದು ಸಮಾರಂಭದಲ್ಲಿ ತಿಳಿಸಿದರು.

○

ಮೈಸೂರಿನಲ್ಲಿ ರಾಜ್ಯ ಮಟ್ಟದ ದಸರಾ ಕ್ರೀಡೆಗಳ ಸ್ಪರ್ಧೆಯನ್ನು ಈ ತಿಂಗಳು 29 ರಿಂದ 4 ದಿನಗಳು ನಡೆಸಲಾಗುವುದು.

ಮೈಸೂರು ದಸರಾ ಕೈಗಾರಿಕಾ ಮತ್ತು ಸಾಂಸ್ಕೃತಿಕ ವಸ್ತುಪ್ರದರ್ಶನ

ದೊಡ್ಡಕೆರೆ ಮೈದಾನ ಮೈಸೂರು 10

ದೂರವಾಣಿ : 20886

24-9-76 ರಿಂದ ಆರಂಭವಾಗಲಿರುವ ದಸರಾ ವಸ್ತುಪ್ರದರ್ಶನದ ಆವರಣದಲ್ಲಿ ಜಾಹೀರಾತು ಫಲಕಗಳನ್ನು ಹಾಕಲು ವ್ಯವಸ್ಥೆ ಮಾಡಲಾಗಿದೆ ಈ ಸೌಲಭ್ಯ ಪಡೆಯಲಿಚ್ಛಿಸುವವರು ಕೂಡಲೇ ವಸ್ತುಪ್ರದರ್ಶನದ ಕಚೇರಿಯಲ್ಲಿ ವಿಚಾರಿಸಬಹುದು ಇದರ ಜೊತೆಗೆ ರೇಡಿಯೋ ಮೂಲಕ ಜಾಹೀರಾತುಗಳನ್ನು ಪ್ರಸಾರ ಮಾಡಲಾಗುವುದು. ಹೆಚ್ಚಿನ ವಿವರಗಳಿಗೆ ಕೆಳಕಂಡವರನ್ನು ಕಾಣಬಹುದು

ಡಿ ಜಯದೇವರಾಜೇ ಅರಸ್, ಬಿ. ಸಿ ಲಿಂಗಯ್ಯ
ಪ್ರಧಾನ ಕಾರ್ಯದರ್ಶಿಗಳು

ಶತಮಾನೋತ್ಸವಕ್ಕೆ ಆಹ್ವಾನ

ಮೆಲ್ಬೋರ್ನ್ — ಮುಂದಿನ ಮಾರ್ಚ್ ಯಲ್ಲಿ ನಡೆಯುವ ಇಂಡಿಯಾ ಆಸ್ಟ್ರೇಲಿಯ ಟೆಸ್ಟ್ ಪಂದ್ಯದ ಒಂದು ವಾರ ಕಾಲದ ವೈಭವದ ಶತಮಾನೋತ್ಸವಕ್ಕೆ ಇನ್ನೂರು ಕ್ರಿಕೆಟ್ ಕ್ರೀಡಾಗಾರರನ್ನು ಆಹ್ವಾನಿಸಲಾಗುವುದು.

○

ಲೈಸನ್ಸ್ ರದ್ದಾಯಿತು

ಬೆಂಗಳೂರು — ಮನೆಯಜಮಾನನ ತೆರಿಗೆ ಶಪ್ತಿಸಿಕೊಂಡ ಆಪಾದನೆಗಾಗಿ ಕನಕಪುರದ ಹಿರೇಹಳ್ಳಿಯಲ್ಲಿನ ರಮಾನಂದ ಪ್ರವಾಸಿ ಚಿತ್ರಮಂದಿರದ ಲೈಸೆನ್ಸ್‌ನ್ನು ಜಲ್ಲಾಧಿಕಾರಿಯವರು ರದ್ದು ಮಾಡಿದರು.

★

ಡಾ || ಮೋದಿಯವರು

ನೇತ್ರದಾನಿ ಶಸ್ತ್ರಭೂಷಣ ಡಾ | ಎಂ ಸಿ ಮೋದಿಯವರನ್ನು ಮಹಾರಾಷ್ಟ್ರದಲ್ಲಿ ಉಚಿತ ನೇತ್ರ ಚಿಕಿತ್ಸೆ ನಡೆಸಲು ಮಹಾರಾಷ್ಟ್ರ ಸರಕಾರ ಆಹ್ವಾನಿಸಿದೆ.

ರಾಷ್ಟ್ರಮಟ್ಟದ ಜನಪದ ಗೀತೆಗಳ ಸ್ಪರ್ಧೆ

ಬೆಂಗಳೂರು — ಕನ್ನಡ ಸಾಹಿತ್ಯ ಪರಿಷತ್ತು ವಜ್ರಮಹೋತ್ಸವದ ನೆನಪಿಗೆ ಈ ವರ್ಷ ರಾಷ್ಟ್ರಮಟ್ಟದ ಜನಪದ ಗೀತೆಗಳ ಸ್ಪರ್ಧೆಯನ್ನು ಏರ್ಪಡಿಸಿದೆ. ವಿವರಗಳನ್ನು, ಕಾರ್ಯದರ್ಶಿ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು 18, ಇವರಿಂದ ಪಡೆಯಬಹುದು.

ಸಾದರ ಸ್ವೀಕಾರ

ಧಾರವಾಡದ ಜಾಗೃತ ಭಾರತ ದವರು ಕಳುಹಿಸಿರುವ, ಶ್ರೀ ವೆಂಕಟೇಶ ಕುಲಕರಣಿ ಯವರಿಂದ ವಿರಚಿತವಾದ "ಕರ್ನಾಟಕ ನಗರ ಭೂಮ್ತಿ ಕರ ಕಾನೂನ್ಯ 1976. ಹೊಗು ನಿಯಮಗಳು" ಪುಸ್ತಕವನ್ನು ಸಾದರಪೂರ್ವಕವಾಗಿ ಸ್ವೀಕರಿಸಿದ್ದೇವೆ. ಕಾನೂನುಗಳ ಸಂಬಂಧದಲ್ಲಿ ಸರಳವಾಗಿ, ಸುಲಭವಾಗಿ ತಿಳಿಯುವಂತೆ ಈಗಾಗಲೆ ಹಲವು ಪುಸ್ತಕಗಳನ್ನು ಪ್ರಕಟಿಸಿರುವ ಶ್ರೀ ವೆಂಕಟೇಶ ಕುಲಕರಣಿಯವರ ಈ ಪುಸ್ತಕವು ತೆರಿಗೆ ನಿಯಮೋಚಿತವಾಗಿಯೂ ಉಪಯುಕ್ತವಾಗಿಯೂ ಇದೆ. ಅರಿಯಬೇಕಾದ ಎಲ್ಲ ವಿಷಯಗಳೂ, ರಿಟರ್ನ್ ಫಾರಂ ಸಮೇತ ಇರುವ ಈ ಪುಸ್ತಕವನ್ನು ಸಂಬಂಧಪಟ್ಟವರು ಹೊಂದಿರುವುದು ಪ್ರಯೋಜನಕರವಾಗಿದೆ. ಬೆಲೆ ರೂ. 4

ವಜ್ರ ಮಹೋತ್ಸವ

ಭಗವಂತನ ಕೃಪೆಯಿಂದ "ಸತ್ಯವಾದಿ" ಯು 60 ನೇ ವರ್ಷ ಅರ್ಥಾತ್ ವಜ್ರ ಮಹೋತ್ಸವ ವರ್ಷವನ್ನು ಪ್ರವೇಶಿಸಿರುವುದೆಂಬುದನ್ನು ತಿಳಿಸಲು ಹರ್ಷಿಸುತ್ತೇವೆ.

ಪೂರ್ಣಮಹೋತ್ಸವ ಕಾಲದಲ್ಲಿ ದೊರೆತ ಶ್ರೀ ಜಗದ್ಗುರುಗಳವರ, ಶ್ರೀ ಸ್ವಾಮಿಗಳವರ ಆಶೀರ್ವಾದ ಅನುಗ್ರಹವನ್ನು, ಉದಾರತೆಯಿಂದ ಕೂಡಿದ ಮಹನೀಯರ ನೆರವನ್ನು ಕೃತಜ್ಞತಾಪೂರ್ವಕವಾಗಿ ಸ್ಮರಿಸಿಕೊಂಡು ರಾಷ್ಟ್ರದ ಪ್ರಪ್ರಥಮ ವಜ್ರ ಮಹೋತ್ಸವದ ಯಶಸ್ವಿ ನೆರವೇರುವಿಕೆಗೆ ಪೂರ್ಣ ಸಹಾಯ ದೊರೆಯುವುದೆಂಬ ವಿಶ್ವಾಸ ಹೊಂದಿದ್ದೇವೆ.

Contribute Liberally to the National Defence Fund

Protect the Cow

ವುಡ್‌ಲಾಂಡ್ 17 9 76 ರಿಂದ

ಅವೋಫು 3 ನೇ ವಾರ

ದಸ್ ನಂಬರಿ

ಹಿಂದಿ

ಕಲರ್

ಮನೋಜ್ ಕುಮಾರ್ ಹೇಮಮಾಲಿನಿ

ಪ್ರೇಮನಾಥ್ ಪ್ರಾಣ್ ಮುಂತಾದವರ ಅಭಿನಯ

ದಿನ 3 ಪ್ರದರ್ಶನಗಳು

ಅಪೆರಾ 17 9 76 ರಿಂದ

ವಿಜಯವಾಣಿ

ಶ್ರೀನಾಥ್ ಕಲ್ಪನ ದ್ವಾರಕೀಶ್ ರಾಜಾಶಂಕರ್ ಅಭಿನಯ

ಕನ್ನಡ ಶೀಘ್ರ ವಿನಾಯಿತಿ ಪ್ರತಿ ದಿನ 3 ಪ್ರದರ್ಶನಗಳು

SHAKTI

SUDHA

A Superb Tonic

Edited Printed and Published by Dharmapracharanmata M S Krishna Rao (Proprietor) at the Satyavadi Press, Chamarajapuram, Mysore 4